





ಫ್ರಾನ್ಸಿಸ್ ಚರ್ಚ್



‘ಚೈನೀಸ್ ಫಿಶಿಂಗ್ ನೆಟ್ಸ್’

ಶತಮಾನದಲ್ಲಿ ಇಲ್ಲಿಗೆ ಬಂದಿದ್ದ ಈ ತಂತ್ರಜ್ಞಾನ ವಿಧಾನದಲ್ಲಿ ಮೀನುಗಾರಿಕೆ ಈಗಲೂ ನಡೆಯುತ್ತಿದೆ. ಮಂಗೋಲಿಯದ ಕುಬ್ಲಾಯ್ ಖಾನ್‌ನ ಮೂಲಕ ಈ ಬಲೆಯ ತಂತ್ರಜ್ಞಾನ ಇಲ್ಲಿಗೆ ಬಂತೆನ್ನುತ್ತದೆ ಇತಿಹಾಸ. ಎತ್ತರಕ್ಕೆ ನಿಲ್ಲಿಸಿದ ಈ ಬಲೆಗಳ ಮೂಲಕ ದೊಡ್ಡ ಅಲೆಗಳು ಬರುವ ಸಂದರ್ಭದಲ್ಲಿ ಮೀನು ಹಿಡಿಯುತ್ತಾರೆ. ಸಂಜೆಯ ಸೂರ್ಯಾಸ್ತದ ಹಿನ್ನೆಲೆಯಲ್ಲಿ ಈ ಬಲೆಗಳ ನೋಟ ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತದೆ.

ಕೊಚ್ಚಿಯ ಹಿನ್ನೀರುಗಳಲ್ಲಿ ನಿಮಗೆ ದೋಣಿಮನೆಗಳು ಕಾಣಸಿಗುತ್ತವೆ. ದೋಣಿಮನೆಗಳು ಪ್ರವಾಸೋದ್ಯಮದಲ್ಲಿ ಹೊಸದೊಂದು ‘ಟ್ರೆಂಡ್’ಅನ್ನು ಹುಟ್ಟುಹಾಕಿದೆ. ಖಾಸಗಿತನವನ್ನು ಹೆಚ್ಚು ಇಷ್ಟಪಡುವ ಕಾರಣ ಇತರ ರಿಸಾರ್ಟ್‌ಗಳಿಗಿಂತಲೂ ಇಂತಹ ದೋಣಿಮನೆಗಳನ್ನೇ ವಿದೇಶೀ ಪ್ರವಾಸಿಗರು ಹೆಚ್ಚು ಆಶ್ರಯಿಸುತ್ತಾರೆ. ಈ ದೋಣಿಮನೆಗಳಲ್ಲಿ ನಿತ್ಯಜೀವನದ ಎಲ್ಲ ಸೌಲಭ್ಯಗಳೂ ದೊರೆಯುತ್ತವೆ. ಆದರೆ ಇವುಗಳ ದುಬಾರಿ ದರದಿಂದಾಗಿ ಇವುಗಳಿಗೆ ಬರುವವರು ಹೆಚ್ಚಾಗಿ ವಿದೇಶೀಯರು ಮತ್ತು ಶ್ರೀಮಂತ ಪ್ರವಾಸಿಗರು ಮಾತ್ರ.

ಯಹೂದಿಗಳೂ ಹಿಂದೆ ಇಲ್ಲಿಗೆ ಬಂದಿದ್ದರು. ಇಲ್ಲಿ ಈಗಲೂ ವಾಸವಾಗಿರುವ ಕೆಲವು ಯಹೂದೀ ಕುಟುಂಬಗಳು ಇದಕ್ಕೆ ಸಾಕ್ಷಿ. ಕೆಲವು ಯಹೂದೀ ಮಂದಿರಗಳಿವೆ. ಇವುಗಳನ್ನು ‘ಸಿನಗಾಗ್’ ಎನ್ನುತ್ತಾರೆ. ಇವುಗಳು ಹೊರಗಿನಿಂದ ಕ್ರಿಶ್ಚಿಯನ್ ಚರ್ಚ್‌ಗಳಂತೆ ಕಂಡರೂ ಒಳಭಾಗದಲ್ಲಿ ವಿಭಿನ್ನವಾಗಿವೆ.

ಕೊಚ್ಚಿ ನಗರದಿಂದ ಸುಮಾರು 10 ಕಿ.ಮೀ ದೂರದಲ್ಲಿರುವ ತ್ರಿಪ್ಪೂಣಿತ್ತುರದಲ್ಲಿ ಹಿಲ್ ಪ್ಯಾಲೇಸ್ ಮ್ಯೂಸಿಯಂ ಇದೆ. ಅಂದಿನ ಅರಮನೆ ಈಗ ವಸ್ತುಸಂಗ್ರಹಾಲಯದ ರೂಪ ಪಡೆದಿದೆ. ಹಲವಾರು ಕಟ್ಟಡಗಳಿರುವ ಈ ಮ್ಯೂಸಿಯಂ ಸಂಕೀರ್ಣದಲ್ಲಿ ಕೇರಳದ ರಾಜವಂಶಗಳ ಪಳೆಯುಳಿಕೆಗಳನ್ನು ಕಾಣಬಹುದು. ಎಡಪ್ಪಳ್ಳಿ ಎಂಬಲ್ಲಿಯೂ ಕೇರಳ ಇತಿಹಾಸವನ್ನು ತಿಳಿಸುವ ಮ್ಯೂಸಿಯಂ ಇದೆ.

## ಹೋಗುವುದು ಹೇಗೆ?

ಕೊಚ್ಚಿ ಅಥವಾ ಎರ್ನಾಕುಳಮ್ ನಗರವು ಭಾರತದ ಹೆಚ್ಚಿನ ಎಲ್ಲಾ ನಗರಗಳಿಂದಲೂ ನೇರ ಸಂಪರ್ಕ ಹೊಂದಿದೆ. ಬಸ್, ಟ್ರೈನ್ ಹಾಗೂ ವಿಮಾನ ಮೂಲಕ ಕೊಚ್ಚಿ ನಗರವನ್ನು ಸುಲಭವಾಗಿ ತಲುಪಬಹುದು.